# ಜಾಣರ ಟ್ರೋಫಿ

ಪಾರ್ವತಿಗೆ ಗಣಪನೆಂದರೆ
ಅಪರಂಜಿ ಚಿನ್ನ
ಶಿವನಿಗೆ ಷಣ್ಮುಖನೆಂದರೆ
ಪರಿಶುದ್ಧ ರನ್ನ

ಆಯೋಜಿಸಿದರು ಮಕ್ಕಳಿಗೆ
ಲೋಕಪ್ರದಕ್ಷಿಣೆ ಸ್ಪರ್ಧೆಯನ್ನ
ಬಹುಮಾನವಾಗಿ ಇಟ್ಟರು
'ಜಾಣರ ಜಾಣ' ಟ್ರೋಫಿಯನ್ನ

ನವಿಲನೇರಿ ಸರ್ರನೆ ಹಾರಿದ
ತನ್ನದೆ ಗೆಲುವೆಂದು ಷಣ್ಮುಖ
ಇಲಿಯನೇರಿ ಸಲೀಸಾಗಿ ಸುತ್ತಿದ
ಶಿವಪಾರ್ವತಿಯರ ಗಜಮುಖ

ದೇಶ ಸುತ್ತುವ ಮುನ್ನ
ಕೋಶ ಓದುವ ಮುನ್ನ
ಮಕ್ಕಳು ಪಡೆಯಬೇಕು
ಹೆತ್ತವರ ಅನುಗ್ರಹವನ್ನ

ಇದನ್ನರಿತಿದ್ದ ಗಣಪ ಸುತ್ತಿದ
ಶಿವಪಾರ್ವತಿಯರನ್ನ
ಪಡೆದುಬಿಟ್ಟ ಜಾಣರ ಜಾಣ
ಎಂಬ ಟ್ರೋಫಿಯನ್ನ

■ **ಮಲ್ಲಿಕಾರ್ಜುನ ಸುರಧೇನುಪುರ**



ಶಿಲ್ಪಾ ಕಬ್ಬಿಣಕಂತಿ



ಶಿಲ್ಪಾ ಕಬ್ಬಿಣಕಂತಿ

# ಅಮ್ಮನ ದೋಸೆ

ಅಮ್ಮನು ಮಾಡಿದ
ಗರಿ ಗರಿ ದೋಸೆ
ತಿನ್ನಲು ನಮಗೆ
ಎಲ್ಲಿಲ್ಲದ ಆಸೆ

ದೋಸೆಯ
ಮೇಲೆ ತುಪ್ಪ
ಆಗಬೇಕು ನಾನು
ತಿಂದು ದಪ್ಪ

ಸರ ಸರ ಬೀಳುವುದು,
ಗೋಲಾಕಾರ
ಆಲೂ, ಬೆಣ್ಣೆ
ಚಟ್ನಿಯ ಅಲಂಕಾರ

ಬಾಯಲಿ ಇಟ್ಟರೆ
ಕರಗುವುದು
ಖಾಲಿಯಾದರೆ
ಜೀವ ಮರಗುವದು

ತಿಂದರೆ ಬೇಕು
ಮತ್ತೊಂದು
ಕೊಡುವಳು
ಅಮ್ಮ ಮುತ್ತೊಂದು

ಅಮ್ಮನ ದೋಸೆ
ಹಲವು ಬಗೆ
ಸವಿಯುವುದು
ನನ್ನಯ ನಾಲಿಗೆ

■ **ಮಹಾಂತೇಶ ಮಾಗನೂರ**